ವಿಭಾವರಿಯ ಕಡೆಗೆ ತಿರುಗಿಸಿದಳು. 'ಟ್ರೂತ್ ಆರ್ ಡೇರ್?' ಎನ್ನುವ ಪ್ರಶ್ನೆಗೆ ಮೈಮುರಿಯುತ್ತಾ ಎದ್ದ ವಿಭಾವರಿ, 'ಡೇರ್ ಬಾಬ, ಟ್ರೂತ್ ಜಾಸ್ತಿ ಆಗೋಯ್ತು, ತಡೆದುಕೊಳ್ಳೋದು ಕಷ್ಟ ಆಗ್ತಾ ಇದೆ' ಎಂದು ನಕ್ಕಳು. ಅವಳೊಡನೆ ನಕ್ಕ ಮಧುವಂತಿ, 'ಓಕೆ ಈಗ ನಮ್ಮಲ್ಲಿ ಯಾರನ್ನು ಕಂಡರೆ ನಿನಗೆ ಇಷ್ಟವೋ ಅವರಿಗೆ ಒಂದು ಮುತ್ತು ಕೊಡು' ಎಂದಳು. 'ಓಕೆ' ಎಂದ ವಿಭಾವರಿ ಸ್ವಲ್ಪ ದೂರ ನಿಂತು ಮೂವರನ್ನೂ ಒಬ್ಬೊಬ್ಬರಾಗಿ ದಿಟ್ಟಿಸಿದಳು. ಕಲ್ಯಾಣಿ, ಮೌನವಾಗಿದ್ದರೂ ಎಂದೂ ತಲೆ ತಗ್ಗಿಸದ ಕಲ್ಯಾಣಿ. ಅವಳ ಉದ್ಯಮ, ಅದನ್ನು ಅವಳು ಮುನ್ನಡೆಸುತ್ತಿದ್ದ ರೀತಿ, ಅವಳು ಎದುರಿಸುತ್ತಿದ್ದ ಸವಾಲುಗಳು... ಅವಳನ್ನು ಕಂಡರೆ ಪ್ರೀತಿ, ಅದಕ್ಕೂ ಮಿಗಿಲಾಗಿ ಗೌರವ ಇತ್ತು. ಇನ್ನು ಮಧುವಂತಿ ಎಂದರೆ ಇಲ್ಲಿಯವರೆಗೂ ಚಿನ್ನದ ಚಮಚ ಇಟ್ಟುಕೊಂಡು ಹುಟ್ಟಿದ ಪ್ರಿವಿಲೈಜ್ಡ್ ಹೆಣ್ಣು ಎನ್ನುವ ಭಾವನೆ ಇತ್ತು. ಆದರೆ ಇಂದು ನೋಡಿದ ಮಧುವಂತಿ ಬೇರೆಯೇ. ಬದುಕು ನೀಡಿದ ಆಘಾತವನ್ನು ಅವಳು ಎದುರಿಸಿದ ರೀತಿಯಿಂದ ವಿಭಾವರಿಗೆ ಥ್ರಿಲ್ ಆಗಿ, ಈಕೆ ನಿಜಕ್ಕೂ ಫೈರ್‌ಬ್ರಾಂಡ್ ಅನ್ನಿಸಿದ್ದಳು. ಕಡೆಯದಾಗಿ ಅವಳು ನೋಡಿದ್ದು ಸಾವನಿಯನ್ನು. ಕೋಲು ಮುಖ, ನರ್ತಕಿಗೆ ಸಂಪತ್ತಾದ ಅಗಲವಾದ ಕಣ್ಣುಗಳು, ಚೂಪಾದ ಮೂಗು, ತಿದ್ದಿದಂತಿದ್ದ ತುಟಿಗಳು... ಅದೆಲ್ಲಕ್ಕೂ ಮಿಗಿಲಾಗಿ ಪುಟ್ಟ ಆಕಾರದ ಅವಳಲ್ಲಿ ಒಂದು ಮಾರ್ದವತೆ ಇತ್ತು, ಅದು ಅವಳಿಗೆ ವಲ್ನರಬಿಲಿಟಿ ಕೊಡುತ್ತಿತ್ತು, ಅವಳನ್ನು ನೋಡಿದಾಗ ವಿಭಾವರಿಗೆ ಅವಳ ಕಣ್ಣುಗಳ ನೋವನ್ನೆಲ್ಲಾ ಒರೆಸಿ ಸಂತೈಸಬೇಕು ಅನ್ನಿಸುತ್ತಿತ್ತು. ಈಗಲೂ ಸಾವನಿಯ ಮುಖದಲ್ಲಿ ಅದೇ ನೋವಿತ್ತು, ಅವಳ ಕಣ್ಣುಗಳಲ್ಲಿ ನಿರಂತರವಾಗಿರುವ ನೋವು, ನಗುನಗುತ್ತಾ ಇರುವಾಗ ನಿಟ್ಟುಸಿರಾಗಿ ಬಂದು ಹೋಗುವ ಆ ನೋವು, ಅಭಿಮಾನಿಗಳು, ಮನ್ನಣೆ, ಪ್ರಶಸ್ತಿ, ಪ್ರತಿಭಾವಂತ ಪತಿ... ಎಲ್ಲವೂ ಇವೆ ಎಂದುಕೊಂಡವಳ ಕಣ್ಣುಗಳಲ್ಲಿ 'ಇಲ್ಲ'ವನ್ನು ತುಂಬಿತುಳುಕಿಸುತ್ತಿದ್ದ ನೋವು... ವಿಭಾವರಿಗೆ ಇನ್ನು ತಡೆಯಲಾಗಲಿಲ್ಲ. ಮೆಲ್ಲನೆ ಹೆಜ್ಜೆ ಮುಂದಿಟ್ಟಳು, ಸಾವನಿಯ ಪಕ್ಕ ನಿಂತು ಬಾಗಿದಳು, ಸಾವನಿಯ ಮುಖದ ಮೇಲೆ ಅದೇ ರೆಡಿಮೇಡ್ ನಗು. ವಿಭಾವರಿ ಅವಳ ಕಣ್ಣುಗಳನ್ನೇ ದಿಟ್ಟಿಸಿದಳು, ದಿಟ್ಟಿಸುತ್ತಲೇ ಇದ್ದಳು. ಸಾವನಿಯ ಮುಖದಲ್ಲಿ ಗೊಂದಲ, ಪ್ರಶ್ನೆ... ವಿಭಾ ಮೃದುವಾಗಿ ಅವಳ ಕೆನ್ನೆಗಳನ್ನು ಬಳಸಿ ಮುಖವನ್ನು ಮೃದುವಾಗಿ ಮೇಲೆತ್ತಿದಳು, ಇನ್ನಿಲ್ಲದ ಆರ್ದ್ರತೆಯಿಂದ ಅವಳ ಹಣೆ ಮೇಲೆ ಚುಂಬಿಸಿದಳು. ಹೊರಗೆ ಮಳೆ ಧೋ ಎಂದು ಸುರಿಯುತ್ತಿತ್ತು. ಮಧುವಂತಿ ಮತ್ತು ಕಲ್ಯಾಣಿ ನೋಡುತ್ತಿರುವಾಗಲೇ ಬಿಗಿಯಾಗಿದ್ದ ಸಾವನಿಯ ಭುಜಗಳು ಸಡಿಲವಾದವು, ಮುಷ್ಟಿಹಿಡಿದಿದ್ದ ಅಂಗೈಗಳು ಬಿಡಿಸಿಕೊಂಡು, ಬೆರಳುಗಳು ಅರಳಿದವು. ಹೆಪ್ಪುಗಟ್ಟಿದ್ದ ಮಂಜಿನ ಗೊಂಬೆಯೊಂದು ಅಪ್ಪುಗೆಯ ಬಿಸಿಗೆ ಕರಗುವ ಹಾಗೆ, ಜನ್ಮಾಂತರಗಳ ಅನಂತರ ಮಾನವ ಸ್ಪರ್ಶ ದಕ್ಕಿದ ಅಹಲ್ಯೆಯ ಹಾಗೆ ಅವಳು ಕರಗಿ, ಪುಡಿಪುಡಿಯಾಗಿ, ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ತನಗೆ ಬೇಕಾಗಿದ್ದು ಇದಷ್ಟೇ, ತನ್ನನ್ನು ಮನುಷ್ಯಳೆಂದು ಪರಿಗಣಿಸುವ ಕರಗಳ ಸ್ಪರ್ಶ ಮಾತ್ರ ಅನ್ನಿಸಿ, ಕೆನ್ನೆ ಹಿಡಿದಿದ್ದ ವಿಭಾವರಿಯ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಆದಿಮದ ದುಃಖವನ್ನೆಲ್ಲಾ ಇಂದು ಹರಿಸಿಯೇ ತೀರಿಸುತ್ತೇನೆ ಎನ್ನುವ ಹಾಗೆ ಸಾವನಿ ಅಳುತ್ತಲೇ ಇದ್ದಳು. ಸ್ವಲ್ಪ ಹೊತ್ತು ಸುಮ್ಮನಿದ್ದ ವಿಭಾವರಿ ಮಾತನಾಡತೊಡಗಿದಳು, 'ನಾನು ನನ್ನ ಗೆಳೆಯನ ಜೊತೆ ಇದ್ದೀನಿ. ಮದ್ವೆ ಆಗಿಲ್ಲ, ಆಗ್ತೀವಿ ಯಾವಾಗಲೋ. ಆಗದೆಯೂ ಇರಬಹುದು, ಗೊತ್ತಿಲ್ಲ. ವರ್ಷಗಳಿಂದ ಜೊತೆಗೇ ಇದ್ದೇವೆ. ಅವನಿಗೆ ಕೆಲಸ ಇಲ್ಲದಾಗ ನಾನು ಮನೆ ನಡೆಸುತ್ತೇನೆ, ನನಗೆ ಕೆಲಸ ಇಲ್ಲದಾಗ ಅವನು ಮನೆ ನಡೆಸುತ್ತಾನೆ. ಇಬ್ಬರಿಗೂ ಇದ್ದಾಗ ಊರು ಸುತ್ತುತ್ತೇವೆ. ಇಂದಿನ ಅವನು ಇದು ಶುರುವಾದಾಗ ಇದ್ದ ಅವನಲ್ಲ, ನಾನೂ ಆ ನಾನಲ್ಲ. ಇನ್ನೊಬ್ಬರಿಗಾಗಿ ಇಬ್ಬರೂ ಬದಲಾಗಿದ್ದೇವೆ. ನಾಳೆ ಇನ್ನೂ ಬದಲಾಗಬಹುದು, ಇಬ್ಬರೂ, ಅಥವಾ ಯಾರೋ ಒಬ್ಬರು ದೂರಾಗಬಹುದು. ಆದರೆ, ಇಷ್ಟು ವರ್ಷ ಜೊತೇಲಿದ್ದೆವಲ್ಲ,